# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 540 |
| ಉತ್ತರಿಸಬೇಕಾದ ದಿನಾಂಕ | : 11.07.2023 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಹಕಾರಿಗಳಿಗೆ ನಗದು ರಹಿತ ಚಿಕಿತ್ಸೆ ಒದಗಿಸುವ "ಯಶಸ್ವಿನಿ" ಯೋಜನೆಯಡಿ ನೋಂದಣಿಗಳಾಗಿರುವವರ ಸಂಖ್ಯೆ ಎಷ್ಟು; ಸದರಿ ಯೋಜನೆಯಡಿ ಸಹಕಾರಿಗಳಿಗೆ ಸಿಗುವ ಸೌಲಭ್ಯ ವಿವರಗಳೇನು: | ಪರಿಷ್ಕೃತ ಯಶಸ್ವಿನಿ ಯೋಜನೆಯಡಿ 30.00ಲಕ್ಷ ಸದಸ್ಯರನ್ನು ನೋಂದಾಯಿಸಿಕೊಳ್ಳುವ ಗುರಿ ನಿಗದಿಪಡಿಸಿಕೊಳ್ಳಲಾಗಿತ್ತು. ಮಾರ್ಚ್-2023ರ ಅಂತ್ಯಕ್ಕೆ ರೂ.45.80ಲಕ್ಷ ಸದಸ್ಯರು ನೋಂದಾಯಿಸಿಕೊಂಡಿರುತ್ತಾರೆ.<br><br>ಯೋಜನೆಯಡಿ ಸಹಕಾರಿಗಳಿಗೆ ಸಿಗುವ ಸೌಲಭ್ಯಗಳ ವಿವರವನ್ನು **ಅನುಬಂಧ**-1 ರಲ್ಲಿ ನೀಡಲಾಗಿದೆ. |
| ಆ) | ಪ್ರಸ್ತುತ ಯಶಸ್ವಿನಿ ಯೋಜನೆಯಡಿ ನೋಂದಣಿಗಳಾಗಿರುವವರ ಎಲ್ಲಾ ಸಹಕಾರಿಗಳಿಗೆ ಈಗಾಗಲೇ ಯಶಸ್ವಿನಿ ಕಾರ್ಡ್ ವಿತರಿಸಲಾಗಿದೆಯೇ: | ಪ್ರಸ್ತುತ ಯಶಸ್ವಿನಿ ಯೋಜನೆಯಲ್ಲಿ 45.00ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಸದಸ್ಯರು ನೋಂದಾಯಿಸಿಕೊಂಡಿರುತ್ತಾರೆ. ಪ್ರಧಾನ ಅರ್ಜಿದಾರರು ಒಳಗೊಂಡಂತೆ ಕುಟುಂಬದ ಎಲ್ಲಾ ಅರ್ಹ ಸದಸ್ಯರಿಗೆ ಸೇರಿ ಒಂದು ಯೂನಿಕ್ ಸಂಖ್ಯೆ ಇರುವ ಪ್ಲಾಸ್ಟಿಕ್ ಗುರುತಿನ ಕಾರ್ಡ್‌ನ್ನು ವಿತರಿಸಲಾಗುವುದು. ಯಶಸ್ವಿನಿ ಯೋಜನೆಯಡಿ ಗುರುತಿನ ಚೀಟಿಗಳನ್ನು ಮುದ್ರಿಸಲು ಅರ್ಹ ಬಿಡ್ದುದಾರರಾಗಿ M/s. Sumukha Technologies, Bangalore ಸಂಸ್ಥೆರವರು ಟೆಂಡರ್‌ನಲ್ಲಿ ಆಯ್ಕೆಯಾಗಿರುತ್ತಾರೆ.<br><br>ಯಶಸ್ವಿನಿ ಯೋಜನೆಯಲ್ಲಿ ನೋಂದಣಿಯಾಗಿರುವ 45.00ಲಕ್ಷ ಸದಸ್ಯರಿಗೆ ಸಂಬಂಧಿಸಿದಂತೆ ಪ್ರತಿ ಕುಟುಂಬಕ್ಕೆ ಒಂದು ಕಾರ್ಡಿನಂತೆ 12.89 ಲಕ್ಷ ಕಾರ್ಡ್‌ಗಳನ್ನು ಫಲಾನುಭವಿ ಕುಟುಂಬಗಳಿಗೆ ದಿನಾಂಕ:01-07-2023ರ ಅಂತ್ಯಕ್ಕೆ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿಗೆ ಕಾರ್ಡುಗಳನ್ನು, ಕಾರ್ಡು ಮುದ್ರಕರು ನೇರವಾಗಿ ರವಾನಿಸಿರುತ್ತಾರೆ. ಅಪೂರ್ಣ ಅಥವಾ ಅಸ್ಪಷ್ಟ ಮಾಹಿತಿ ಇರುವ ಸುಮಾರು 70,000 ಸದಸ್ಯರಿಗೆ ಸಂಬಂಧಿಸಿದಂತೆ 18,153 ಕಾರ್ಡುಗಳು ಮುದ್ರಣವಾಗದಿರುವುದರಿಂದ ವಿತರಿಸಿರುವುದಿಲ್ಲ. |
| ಇ) | ಯಶಸ್ವಿನಿ ಯೋಜನೆಯಡಿ ನೋಂದಣಿಗಳಾಗಿ ಇದುವರೆಗೂ ಯಶಸ್ವಿನಿ ಕಾರ್ಡ್ ಸಿಗದೇ ಇರುವವರಿಗೆ ಯಾವ ಕಾಲಮಿತಿಯೊಳಗೆ ಯಶಸ್ವಿನಿ ಕಾರ್ಡ್ ವಿತರಿಸಲಾಗುವುದು: | ಯೋಜನೆಯಡಿ ಕಾರ್ಡ್ ಸಿಗದೇ ಬಾಕಿ ಇರುವ ಅರ್ಹ ಸದಸ್ಯರಿಗೆ ದಿನಾಂಕ: 31-07-2023ರೊಳಗಾಗಿ ಕಾರ್ಡುಗಳನ್ನು ವಿತರಿಸಲಾಗುವುದು. |
| ಈ) | ನೋಂದಣಿಗಳಾಗಿದ್ದರೂ ಇದುವರೆವಿಗೂ ಯಶಸ್ವಿನಿ ಕಾರ್ಡ್ ಸಿಗದೇ ಇರುವುದರಿಂದ ಖಾಸಗಿ ಆಸ್ಪತ್ರೆಗಳಲ್ಲಿ ಸೂಕ್ತ ಚಿಕಿತ್ಸೆ ಪಡೆಯುವಲ್ಲಿ ವ್ಯತ್ಯಯ ವಾಗುತ್ತಿರುವುದಕ್ಕೆ ಸರ್ಕಾರ ಏನು ಕ್ರಮ ವಹಿಸಿದೆ? | ಯಶಸ್ವಿನಿ ಯೋಜನೆಯಡಿ ಸದಸ್ಯರ ನೋಂದಣಿಯನ್ನು ದಿನಾಂಕ:01-11-2022 ರಿಂದ ಪ್ರಾರಂಭಿಸಿ ನಂತರ ಹಂತ ಹಂತವಾಗಿ ವಿಸ್ತರಿಸಿ ಅಂತಿಮವಾಗಿ ದಿನಾಂಕ:31-03-2023 ರವರೆಗೆ ವಿಸ್ತರಿಸಲಾಯಿತು.<br><br>ರಾಜ್ಯಾದ್ಯಂತ ಇರುವ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಫಲಾನುಭವಿಗಳಿಗೆ ಚಿಕಿತ್ಸೆಯನ್ನು ದಿನಾಂಕ: 01-01-2023 ರಿಂದ ಪ್ರಾರಂಭಿಸಲಾಯಿತು. ಆ ದಿನಾಂಕಕ್ಕೆ ಸದಸ್ಯರ ನೋಂದಣಿ ಅಭಿಯಾನ ಇನ್ನು ಮುಂದುವರೆದಿದ್ದರಿಂದ ಸದಸ್ಯರ ಕುಟುಂಬಗಳಿಗೆ ಪೂರ್ಣ ಪ್ರಮಾಣದ ಕಾರ್ಡುಗಳನ್ನು ಆ ದಿನಾಂಕಕ್ಕೆ ಒದಗಿಸಲಾಗಿರುವುದಿಲ್ಲ. |

| | | |
|---|---|---|
| | | ಇಂತಹ ಸಂದರ್ಭದಲ್ಲಿ ಯಾವುದೇ ಫಲಾನುಭವಿ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ತೆರಳಿದಾಗ ಕಾರ್ಡು ಸಿಗದಿದ್ದಲ್ಲಿ ಅಥವಾ ದೊರೆತಿರುವ ಕಾರ್ಡಿನಲ್ಲಿ ಮುದ್ರಣ ಲೋಪ ಅಥವಾ ತಾಂತ್ರಿಕ ದೋಷ ಇದ್ದಲ್ಲಿ, ಅಂತಹ ಸದಸ್ಯರ ವಿವರಗಳುಳ್ಳ (ಫೋಟೋ ಸಮೇತ) ಪ್ರಪತ್ರವನ್ನು ಆಸ್ಪತ್ರೆಯಿಂದಾಗಲಿ, ಫಲಾನುಭವಿಯಿಂದಾಗಲಿ, ಸಂಬಂಧಿಸಿದ ಸಹಕಾರ ಸಂಘ ಅಥವಾ ಜಿಲ್ಲಾ ಉಪ ನಿಬಂಧಕರಿಂದಾಗಲಿ ಪಡೆದು, ಮಾಹಿತಿ ಬಂದ ದಿನವೇ ಯಶಸ್ವಿನಿ ಟ್ರಸ್ಟ್ ಕಾರ್ಡು ತಯಾರಕ ಸಂಸ್ಥೆಯ ಮೂಲಕ ಇ-Card ಅನ್ನು ಮಾಡಿಸಿ ತುರ್ತಾಗಿ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗುತ್ತಿದೆ. ಈ ವ್ಯವಸ್ಥೆ ಈಗಲೂ ಮುಂದುವರೆದಿದೆ.<br><br>ಯಶಸ್ವಿನಿ ಯೋಜನೆಯಡಿ ನೋಂದಾಯಿಸಿಕೊಂಡಿರುವ ಸದಸ್ಯರ ಬಹುತೇಕ ಎಲ್ಲಾ ಕುಟುಂಬಗಳ 12.89ಲಕ್ಷ ಕಾರ್ಡುಗಳ ಡೇಟಾ ಎಂಟ್ರಿ ಮಾಡಿ ಕಾರ್ಡುಗಳನ್ನು ತಯಾರಿಸಿ ದಿನಾಂಕ:01.07.2023ರ ಅಂತ್ಯಕ್ಕೆ ರಾಜ್ಯದ ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿಗೆ ನೇರವಾಗಿ ರವಾನಿಸಿದೆ. ಉಪ ನಿಬಂಧಕರು ಸಂಬಂಧಿಸಿದ ಸಹಕಾರ ಸಂಘಗಳ ಮೂಲಕ ಫಲಾನುಭವಿಗಳಿಗೆ ಕಾರ್ಡುಗಳನ್ನು ತಲುಪಿಸುವ ವ್ಯವಸ್ಥೆಯನ್ನು ಮಾಡಿರುತ್ತಾರೆ.<br><br>ಯಶಸ್ವಿನಿ ಯೋಜನೆಯಲ್ಲಿ ವ್ಯಾಖ್ಯಾನಿಸಿರುವ ಕುಟುಂಬ ಎಂಬ ವ್ಯಾಪ್ತಿಯಲ್ಲಿನ ಸದಸ್ಯರನ್ನು ಹೊರತಾದ ಸದಸ್ಯರನ್ನು ಸೇರಿಸಿರುವುದು, ಒಂದಕ್ಕಿಂತ ಹೆಚ್ಚಿನ ಸಂಘಗಳಲ್ಲಿ ಫಲಾನುಭವಿಗಳು ಸೇರ್ಪಡೆ ಆಗಿರುವುದು ಇತ್ಯಾದಿ ಕಾರಣಗಳಿಗಾಗಿ 18.153 ಕುಟುಂಬ ಕಾರ್ಡುಗಳು ಅಂದರೆ ಸುಮಾರು 70,000 ಸದಸ್ಯರಿಗೆ ಸಂಬಂಧಿಸಿದಂತೆ ಡೇಟಾ ಎಂಟ್ರಿ ಮಾಡಲು ಸಾಧ್ಯವಾಗಿರುವುದಿಲ್ಲವೆಂದು ಕಾರ್ಡು ಮುದ್ರಣಕಾರರು ವರದಿ ಮಾಡಿರುತ್ತಾರೆ. ಈ ದೋಷಗಳನ್ನು ಜಿಲ್ಲಾವಾರು ಪರಿಶೀಲಿಸಿ ಅರ್ಹ ಫಲಾನುಭವಿಗಳೆಂದು ದೃಢಪಟ್ಟಲ್ಲಿ ಅಂತಹ ಎಲ್ಲಾ ಅರ್ಹ ಸದಸ್ಯರಿಗೆ ದಿನಾಂಕ:31.07.2023ರೊಳಗಾಗಿ ಕಾರ್ಡು ವಿತರಿಸಲು ಕ್ರಮವಿಡಲಾಗುವುದು. ಆದಾಗ್ಯೂ, ಯಾವುದೇ ಅರ್ಹ ಫಲಾನುಭವಿಗೆ ಕಾರ್ಡು ಲಭ್ಯವಾಗದಿರುವುದರಿಂದ ಚಿಕಿತ್ಸೆ ಪಡೆಯಲು ವ್ಯತ್ಯಯವಾಗದಂತೆ ಈಗಾಗಲೇ ಸರ್ಕಾರದಿಂದ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಸಿಒ 137 ಸಿಎಲ್‌ಎಸ್ 2023

K.N. Rajanna

(ಕೆ.ಎನ್. ರಾಜಣ್ಣ)
ಸಹಕಾರ ಸಚಿವರು

Lco-540

## ಅನುಬಂಧ – 1

## ರೂಪು ರೇಷೆಗಳು ಹಾಗೂ ಅರ್ಹತಾ ಮಾನದಂಡಗಳು

1. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಹಕಾರ ಸಂಘ ಅಥವಾ ಸಹಕಾರ ಸಂಘಗಳಿಂದ ಸಂಘಟಿಸಲ್ಪಟ್ಟಿರುವ ಸ್ವ-ಸಹಾಯ ಗುಂಪುಗಳ ಸದಸ್ಯರು ಮೂರು ತಿಂಗಳು ಪೂರ್ಣಗೊಂಡಲ್ಲಿ ಅವರ ಕುಟುಂಬವನ್ನು ಒಂದು ಘಟಕವನ್ನಾಗಿ ಪರಿಗಣಿಸಿ, ವಾರ್ಷಿಕ ವಂತಿಗೆಯನ್ನು ಪಾವತಿಸಿ ಯಶಸ್ವಿನಿ ಯೋಜನೆ ಪಡೆಯಲು ಅರ್ಹರಿರುತ್ತಾರೆ. (ಕುಟುಂಬ ಎಂದರೆ ಪ್ರಾಥಮಿಕ ಸದಸ್ಯರ (Principal Member) ತಂದೆ/ತಾಯಿ, ಗಂಡ/ಹೆಂಡತಿ, ಗಂಡು ಮಕ್ಕಳು ಮದುವೆಯಾಗದ ಹೆಣ್ಣು ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಎಂದು ಅರ್ಥೈಯಿಸುವುದು.)

2. 2022–23ನೇ ಸಾಲಿಗೆ ಈ ಯೋಜನೆಯಡಿ

   (ಎ) ಗ್ರಾಮೀಣ ಸಹಕಾರ ಸಂಘಗಳ/ಸ್ವ-ಸಹಾಯ ಗುಂಪುಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.500/-ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ರೂ.100/-ಗಳನ್ನು ಪಾವತಿಸತಕ್ಕದ್ದು,

   (ಬಿ) ಹಾಗೂ ನಗರ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.1000/-ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ರೂ.200/-ಗಳನ್ನು ಪಾವತಿಸತಕ್ಕದ್ದು.

   (ಸಿ) ಅಗತ್ಯ ದಾಖಲಾತಿ ಸಮೇತ ನಿಮ್ಮ ಹತ್ತಿರದ ಸಹಕಾರಿ ಸಂಘಗಳ/ಸ್ವ-ಸಹಾಯ ಶಾಖೆಗೆ ಭೇಟಿ ಮಾಡಿ ಅರ್ಜಿ ಸಲ್ಲಿಸಬೇಕು.

   (ಡಿ) ಸದಸ್ಯರು ಕಡ್ಡಾಯವಾಗಿ ತಮ್ಮ ಮೊಬೈಲ್ ಸಂಖ್ಯೆಯನ್ನು ಒದಗಿಸತಕ್ಕದು.

   (ಇ) ಅಗತ್ಯ ದಾಖಲಾತಿ ಮಾಹಿತಿಗಳಾದ ಪಡಿತರ ಚೀಟಿ, ಪ್ರತಿಯೊಬ್ಬ ಸದಸ್ಯರ ಆಧಾರ್ ಕಾರ್ಡ್, ಪ್ರತಿಯೊಬ್ಬರ ಎರಡು ಪಾಸ್ಪೋರ್ಟ್ ಸೈಜಿನ ಫೋಟೋ ಒದಗಿಸಿ ನಿಗದಿತ ವಾರ್ಷಿಕ ವಂತಿಗೆಯನ್ನು ಪಾವತಿಸಬೇಕು.

   (ಎಫ್) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯ ಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ.

   (ಜಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಪ್ರತಿಯೊಬ್ಬ ಕುಟುಂಬ ಸದಸ್ಯರ RD ನಂಬರ್ ಇರುವ ಜಾತಿ ಪ್ರಮಾಣ ಪತ್ರ ಒದಗಿಸಬೇಕು.

   (ಹೆಚ್) ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು ಮತ್ತು ಸಹಕಾರಿ ನೇಕಾರರು ಕೂಡ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

3. ಮದುವೆಯಾಗಿರುವ ಹೆಣ್ಣು ಮಗಳು ಹಾಗು ಅವಳ ಮಕ್ಕಳು ಪ್ರಧಾನ ಅರ್ಜಿದಾರರಾದ ತಂದೆ/ತಾಯಿ/ಅಣ್ಣ/ತಮ್ಮ ಇವರ ಕುಟುಂಬದಲ್ಲಿಯೇ ಯಾವುದೇ ಕಾರಣಕ್ಕೆ (ವಿಧವೆ, ವಿಚ್ಛೇದನ, ಬೇರ್ಪಟ್ಟಿರುವುದು (Separated) ಇತ್ಯಾದಿ) ವಾಸವಾಗಿದ್ದರೆ ಮತ್ತು ಹೆಣ್ಣು ಮಗಳು ಮತ್ತು ಅವರ ಮಕ್ಕಳ ವಂತಿಗೆ ಪಾವತಿಸಿದ್ದರೆ ಅಂತಹ ಹೆಣ್ಣು ಮಗಳು ಮತ್ತು ಅವರ ಮಕ್ಕಳು ಈ ಯೋಜನೆ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಅದಾಗ್ಯೂ ಪ್ರಸಕ್ತ ಸಾಲಿನ ಯೋಜನೆಯ ಅವಧಿಯಲ್ಲಿ ಮದುವೆಯಾದ ಹೆಣ್ಣು ಮಗಳು ತಂದೆ/ತಾಯಿ/ಅಣ್ಣ/ತಮ್ಮ ಇವರ ಜೊತೆ ವಾಸವಾಗಿರದೇ ಸಂಘದ ಕಾರ್ಯವ್ಯಾಪ್ತಿ ಹೊರಗೆ ವಾಸವಿದ್ದರೆ ಅಂತಹ ಸಂದರ್ಭದಲ್ಲಿ ಈ ಯೋಜನೆ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ, ಅವಳೇ ಸಹಕಾರ ಸಂಘದ ಸದಸ್ಯೆಯಾಗಿ ಮೂರು ತಿಂಗಳು ಕಳೆದಿದ್ದಲ್ಲಿ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ.

4. ಸದಸ್ಯತ್ವ ನೊಂದಣಿ ಅವಧಿ ಸಾಲಿನಲ್ಲಿ ಮದುವೆಯಾಗದ ಹೆಣ್ಣುಮಕ್ಕಳಿಗೆ ಪ್ರಧಾನ ಅರ್ಜಿದಾರರು ವಂತಿಗೆ ಪಾವತಿಸಿದ್ದು, ಆನಂತರ ಮದುವೆಯಾಗಿದ್ದಲ್ಲಿ ಅಂತಹ ಮದುವೆಯಾದ ಹೆಣ್ಣು ಮಗಳು ಪ್ರಸಕ್ತ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ಚಿಕಿತ್ಸೆ ಪಡೆಯಲು ಅರ್ಹರಿರುತ್ತಾರೆ.

5. ಅಣ್ಣ/ತಮ್ಮ, ಅಕ್ಕ/ತಂಗಿ, ಅತ್ತೆ/ಮಾವ ಹಾಗು ಚಿಕ್ಕಪ್ಪ/ದೊಡ್ಡಪ್ಪ ಮತ್ತು ಅವರ ಕುಟುಂಬದ ಸದಸ್ಯರು ಇತ್ಯಾದಿ ಸಂಬಂಧಿಗಳು ಈ ಯೋಜನೆಯಡಿ ಅರ್ಹರಾಗುವುದಿಲ್ಲ. ಅದಾಗ್ಯು ಒಂದು ಮನೆಯಲ್ಲಿ ಸೊಸೆ ಪ್ರಧಾನ ಅರ್ಜಿದಾರರಾಗಿದ್ದಲ್ಲಿ ಅವರ ಗಂಡನ ತಂದೆ/ತಾಯಿ ಅಂದರೆ ಅರ್ಜಿದಾರರ ಅತ್ತೆ/ಮಾವ ರವರು ಅರ್ಹ ಸದಸ್ಯರಾಗುತ್ತಾರೆ. ಆದರೆ ಅರ್ಜಿದಾರರ ತಂದೆ/ತಾಯಿಯವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಬರುವುದಿಲ್ಲ. ಮೇಲೆ ವಿವರಿಸಿರುವಂತೆ ಅರ್ಹ ಕುಟುಂಬ ಸದಸ್ಯರನ್ನು ಹೊರತುಪಡಿಸಿ ಬೇರೆ ಯಾವುದೇ ಸದಸ್ಯರನ್ನು ಯಶಸ್ವಿನಿ ಯೋಜನೆಗೆ ಸೇರಿಸುವಂತಿಲ್ಲ. ಒಂದು ವೇಳೆ ಪ್ರಧಾನ ಅರ್ಜಿದಾರರಾಗಲಿ ಅಥವಾ ಸಹಕಾರ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಲಿ ಅರ್ಹರಲ್ಲದ ಸದಸ್ಯರನ್ನು ಕಾರ್ಡಿನಲ್ಲಿ ಸೇರಿಸಿರುವುದು ನಂತರ ಗಮನಕ್ಕೆ

ಬಂದರೆ, ಅಂತಹ ಅರ್ಹರಲ್ಲದ ಸದಸ್ಯರಿಂದ ವಂತಿಗೆ ಪಾವತಿಸಿಕೊಂಡು ಕಾರ್ಡಿನಲ್ಲಿ ಸೇರಿಸಿದ್ದರೂ ಸಹ ಅವರು ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ, ಇಂತಹ ಪ್ರಕರಣಗಳಲ್ಲಿ ನಿಯಮಾನುಸಾರ ಕ್ರಮಜರುಗಿಸಲಾಗುವುದು.

6. ಯಶಸ್ವಿನಿ ಯೋಜನೆಯಡಿ ಈ ಮೇಲೆ ಹೇಳಿರುವ ಅರ್ಹತೆಯುಳ್ಳ ವ್ಯಕ್ತಿಗಳು ಸದಸ್ಯರಾಗಲು ಯಾವುದೇ ವಯೋಮಿತಿ ನಿರ್ಬಂಧವಿರುವುದಿಲ್ಲ.

7. ನವಜಾತ ಶಿಶುವಿನ ತಾಯಿ ಹೆಸರು ಯಶಸ್ವಿನಿ ಕಾರ್ಡ್‌ನಲ್ಲಿದ್ದರೆ 30 ದಿನಗಳವರೆಗೆ ತಾಯಿ ಹೆಸರು ಇರುವ ಯಶಸ್ವಿನಿ ಕಾರ್ಡಿನ ಆಧಾರದ ಮೇಲೆ ಈ ಯೋಜನೆಯಡಿಯಲ್ಲಿ ಬರುವ ಸೌಲಭ್ಯವನ್ನು ಪಡೆಯಬಹುದು.

8. ಸಮಾಪನಗೊಂಡಿರುವ ಸಹಕಾರ ಸಂಘಗಳ, ನಿಷ್ಕ್ರಿಯ ಸಹಕಾರ ಸಂಘಗಳ ಮತ್ತು ನೌಕರರ ಸಹಕಾರ ಸಂಘಗಳ ಸದಸ್ಯರಿಗೆ ಈ ಯೋಜನೆ ಅನ್ವಯಿಸುವುದಿಲ್ಲ.

9. ಪ್ರಧಾನ ಅರ್ಜಿದಾರರು ಮತ್ತು ಅವನ ಕುಟುಂಬದ ಯಾವುದೇ ಸದಸ್ಯನು ಸರ್ಕಾರಿ ನೌಕರರಾಗಿದ್ದಲ್ಲಿ ಅಥವಾ ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಮಾಸಿಕ ರೂ.30,000/- ಕ್ಕಿಂತ ಹೆಚ್ಚು ಅಥವಾ ವಾರ್ಷಿಕ ರೂ.3,60,000/- ಕ್ಕಿಂತ ಹೆಚ್ಚು ಒಟ್ಟು ವೇತನ ಪಡೆಯುತ್ತಿದ್ದಲ್ಲಿ ಈ ಯೋಜನೆಗೆ ಅರ್ಹರಿರುವುದಿಲ್ಲ. ಯಾವುದೇ ಆರೋಗ್ಯ ವಿಮಾ ಯೋಜನೆಯಡಿಯಲ್ಲಿ ಸದಸ್ಯರಾಗಿದ್ದಲ್ಲಿ ಅಂತಹವರು ಯಶಸ್ವಿನಿ ಯೋಜನೆಯಡಿ ಸದಸ್ಯನಾಗಲು ಅರ್ಹನಿರುವುದಿಲ್ಲ.

10. ಯಶಸ್ವಿನಿ ಯೋಜನೆಯಡಿ ಸದಸ್ಯರಿಗೆ ಯೂನಿಕ್ ಐಡಿ ಸಂಖ್ಯೆಯುಳ್ಳ ಪ್ಲಾಸ್ಟಿಕ್ ಕಾರ್ಡ್‌ನ್ನು ಒದಗಿಸಲಾಗುವುದು. ಸದಸ್ಯರು ಈ ಸ್ಮಾರ್ಟ್‌ಕಾರ್ಡ್‌ನ್ನು ಬಳಸಿ ನಗದು ರಹಿತ ಚಿಕಿತ್ಸೆಗಳನ್ನು ಪಡೆಯಬಹುದಾಗಿದೆ.

11. ಈ ಕೆಳಕಂಡ ಸೌಲಭ್ಯಗಳನ್ನು ಯಶಸ್ವಿನಿ ಸದಸ್ಯರಿಗೆ ಒದಗಿಸಲಾಗುವುದು.

ಎ) ಯಶಸ್ವಿನಿ ಯೋಜನೆಯಡಿಯಲ್ಲಿ ಮುಖ್ಯವಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳು ಕಿವಿ, ಮೂಗು, ಗಂಟಲು ವ್ಯಾಧಿಗಳು, ಕರುಳಿನ ಖಾಯಿಲೆಗಳು, ನರಗಳಿಗೆ ಸಂಬಂಧಿಸಿದ ಖಾಯಿಲೆಗಳು, ಕಣ್ಣಿನ ಖಾಯಿಲೆಗಳು, ಮೂಳೆ ರೋಗಗಳು, ಸ್ತ್ರೀಯರಿಗೆ ಸಂಬಂಧಿಸಿದ ಖಾಯಿಲೆಗಳು ಹಾಗೂ ಈ ಯೋಜನೆಯಡಿ ಇತರೆ ಅನುಸೂಚಿತ ಸಾಮಾನ್ಯ ರೋಗಿಗಳಿಗೆ ಸಂಬಂಧಿಸಿದ ಚಿಕಿತ್ಸಾ ಸೌಲಭ್ಯಗಳನ್ನು ಗುರ್ತಿಸಿದ ರಾಜ್ಯದ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು.

ಬಿ) ಪ್ರಸ್ತುತ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ 1650 ಚಿಕಿತ್ಸೆಗಳನ್ನು ಮತ್ತು 478 ICU ಚಿಕಿತ್ಸೆಗಳೂ ಸೇರಿ ಒಟ್ಟು 2128 ಚಿಕಿತ್ಸೆಗಳನ್ನು ಯಶಸ್ವಿನಿ ಯೋಜನೆಗೆ ಅಳವಡಿಸಿಕೊಳ್ಳಲಾಗಿದೆ. ಮುಂದೆ ಯಶಸ್ವಿನಿ ಟ್ರಸ್ಟ್‌ದಲ್ಲಿ ಚರ್ಚಿಸಿ ಅಗತ್ಯತೆ ಕಂಡು ಬಂದಲ್ಲಿ ಚಿಕಿತ್ಸೆಗಳು ಮತ್ತು ದರಗಳ ಪರಿಷ್ಕರಣೆಗೆ ಕ್ರಮವಿಡಲಾಗುವುದು.

ಡಿ) ಯಶಸ್ವಿನಿ ಸದಸ್ಯರಿಗೆ ಜನರಲ್ ವಾರ್ಡ್‌ನಲ್ಲಿ ಚಿಕಿತ್ಸಾ ಸೌಲಭ್ಯ ಪಡೆಯುವಲ್ಲಿ ಅರ್ಹತೆ ಹೊಂದಿರುತ್ತಾರೆ. ರೋಗಿಗಳು ಸ್ವ ಇಚ್ಛೆಯೊಂದಿಗೆ ಉನ್ನತ ವಾರ್ಡ್ ಕೋರಿದಲ್ಲಿ Sharing 2 or 3 bed ಗೆ 15% ಮಿತಿ ಮತ್ತು Private Room ಅಥವಾ Single Bed ತೆಗೆದುಕೊಂಡಲ್ಲಿ 25% ರಷ್ಟು ಹೆಚ್ಚಳದೊಂದಿಗೆ ಉನ್ನತ ವಾರ್ಡ್ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಿದೆ. ಹೆಚ್ಚುವರಿ ಮೊತ್ತವನ್ನು ರೋಗಿಗಳೇ ಭರಿಸತಕ್ಕದ್ದು. ಯಶಸ್ವಿನಿ ಯೋಜನೆಯಲ್ಲಿ ನೆಟ್‌ವರ್ಕ್ ಆಸ್ಪತ್ರೆಯಲ್ಲಿ ಒದಗಿಸಿರುವ ಚಿಕಿತ್ಸಾ ಸೌಲಭ್ಯದಲ್ಲಿ ಔಷಧಿ ವೆಚ್ಚ, ಆಸ್ಪತ್ರೆ ವೆಚ್ಚ, ಶಸ್ತ್ರಚಿಕಿತ್ಸೆಯ ವೆಚ್ಚ, ಆಪರೇಶನ್ ಥೀಯೆಟರ್ ಬಾಡಿಗೆ, ಅರೆವಳಿಕೆ ತಜ್ಞರ ಫೀ, ಸರ್ಜನ್ ಫೀ, ಕನ್ಸಲ್‌ಟೆಂಟ್ ಫೀ, ಬೆಡ್ ಚಾರ್ಜ್, ನರ್ಸ್ ಫೀ ಇತ್ಯಾದಿ ವೆಚ್ಚ ಒಳಗೊಂಡಿರುತ್ತದೆ.

ಇ) ಯಶಸ್ವಿನಿ ಯೋಜನೆಯಲ್ಲಿ ಪ್ಯಾಕೇಜನಲ್ಲಿ Implants ಅಗತ್ಯವಿರುವ ಕಡೆ Implants ದರವನ್ನು ಒಳಗೊಂಡಿರುತ್ತದೆ. (Ex. Knee replacement, lence in cataract surgery) ಒಂದು ವೇಳೆ ಫಲಾನುಭವಿಗಳ ಉನ್ನತ Implants ಅಥವಾ lence ಪಡೆಯಲು ಸ್ವ - ಇಚ್ಛೆಯಿಂದ ಒಪ್ಪಿಗೆ ಸೂಚಿಸಿದಲ್ಲಿ, ಅಂತಹ ಉನ್ನತ Implants ಮತ್ತು lence ಗೆ ತಗಲುವ ವ್ಯತ್ಯಾಸದ ಹೆಚ್ಚುವರಿ ಮೊತ್ತವನ್ನು ಅಂತಹ ಫಲಾನುಭವಿಗಳು ಭರಿಸಿ ಚಿಕಿತ್ಸೆಯನ್ನು ಪಡೆಯಬಹುದು.

ಎಫ್) ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಯಶಸ್ವಿನಿ ಸದಸ್ಯರಿಗೆ ಹೊರ ರೋಗಿ ಚಿಕಿತ್ಸೆಗೆ (OPD) ಗರಿಷ್ಠ ರೂ.200/-ಗಳನ್ನು (ಮೂರು ತಿಂಗಳ ಅವಧಿಗೆ) ಮಿತಿ ನಿಗಧಿಪಡಿಸಿದ್ದು, ಈ ಪೈಕಿ ರೂ.100/- ಗಳನ್ನು ಯಶಸ್ವಿನಿ ಟ್ರಸ್ಟ್‌ವತಿಯಿಂದ ಪಾವತಿಸಲಾಗುವುದು.

**************************

ಸಹಕಾರ ಸಂಘಗಳ ಅಪರ ನಿಬಂಧಕರು
(ಕೈಗಾರಿಕಾ ಮತ್ತು [illegible])
[illegible]